# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.21-2015** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜಿ.ಶಿವಕುಮಾರಿ<br>ಮೈಸೂರು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 03-09-2022. |

**<u>ಪಾಟೀ ಸವಾಲುಃ ಶ್ರೀ ಎನ್.ಆರ್ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುತ್ತದೆ. ಪ್ರತಿವಾದಿ ನನಗೆ ಕ್ರಯದ ಕರಾರನ್ನು ಬರೆದುಕೊಟ್ಟಿದ್ದು ಅದರ ಪ್ರಕಾರ ನೋಂದಣಿ ಮಾಡಿಕೊಡದ ಕಾರಣ ಈ ದಾವಾವನ್ನು ಸಲ್ಲಿಸಿರುತ್ತೇನೆ. ದಿ.28-04-2008 ರಂದು ಪ್ರತಿವಾದಿ ನನಗೆ ಮೊದಲ ಬಾರಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು. ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟ ಸಮಯ ನಾನು ಷೆಡ್ಯೂಲ್ ಸ್ವತ್ತಿನಲ್ಲಿ ವಾಸವಿದ್ದೆನು ಎಂದರೆ ಸರಿಯಲ್ಲ. ದಿ.28-04-2008 ರ ಕರಾರಿನಲ್ಲಿ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಸುತ್ತು-ಮುತ್ತಾ ಮುಸಲ್ಮಾನರು ಮತ್ತು ಸ್ಲಂನ ನಿವಾಸಿಗಳು ವಾಸವಿದ್ದ ಕಾರಣ ನನಗೆ ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡುವ ಇಚ್ಛೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಈಗ ಪ್ರತಿವಾದಿಗೆ ಇಬ್ಬರು ಪ್ರಾಪ್ತ ವಯಸ್ಕ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಪ್ರಾಪ್ತ ವಯಸ್ಕ ಮಕ್ಕಳು ಇರುವ ಕಾರಣ ಹಾಗೂ ನನಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಇಚ್ಛೆ ಇಲ್ಲದೇ ಇದ್ದ ಕಾರಣ ನಾನು ದಿ.28-04-2008 ರ ಕರಾರನ್ನು ದಿ.26-09-2012 ರಂದು ರದ್ದುಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿ.26-09-2012 ರಂದು ಕ್ರಯದ ಕರಾರನ್ನು ರದ್ದುಗೊಳಿಸಿದ ನಂತರ ಪ್ರತಿವಾದಿಯು ನನಗೆ ರೂ.1,10,000/- ಗಳನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಬಾಕಿ ರೂ.10,000/- ಗಳ ಮರುಪಾವತಿಗಾಗಿ ಪ್ರತಿವಾದಿಯಿಂದ ಖಾಲಿ ಛಾಪಾಕಾಗದದ ಮೇಲೆ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ದಿ.30-10-2014 ರಂದು ಪ್ರತಿವಾದಿಗೆ ವಕೀಲರ ಮುಖೇನ ತಿಳುವಳಿಕೆಯನ್ನು ನೀಡಿಸಿರುತ್ತೇನೆ ಎಂದರೆ ಸರಿ. ನಾನು ವಕೀಲರ ಮುಖೇನ ತಿಳುವಳಿಕೆ ನೀಡಿಸಿದ ನಂತರ ಪ್ರತಿವಾದಿಯು ನನ್ನ ಬಳಿ ಬಂದು ಉಳಿಕೆ ರೂ.10,000/- ಗಳನ್ನು ನನಗೆ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಪಡೆದ ಕ್ರಯದ ಕರಾರಿನ ಪೂರ್ಣ ಮೊಬಲಗು ರೂ.1,10,000/- ಗಳನ್ನು ಮರು ಸಂದಾಯ ಮಾಡಿದ್ದರು ಸಹ ಪ್ರತಿವಾದಿ ಸಹಿ ಮಾಡಿ ನೀಡಿದ್ದ ಖಾಲಿ ಛಾಪಾಕಾಗದವನ್ನು ದುರುಪಯೋಗಪಡಿಸಿಕೊಂಡು ದಿ.26-09-2012 ರ ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಿ.26-09-2012 ರಂದು ದಿ.28-04-2008 ರಂದು ಆಗಿದ್ದ ಕ್ರಯದ ಕರಾರನ್ನು ರದ್ದುಗೊಳಿಸಿ ಸದರಿ ಕ್ರಯದ ಕರಾರನ್ನು ಪತ್ರವನ್ನು ನಾನು ಪ್ರತಿವಾದಿಗೆ ವಾಪಸ್ಸು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಪಡದಿರುವ ಕ್ರಯದ ಕರಾರಿನ ಪೂರ್ಣ ಮೊಬಲಗನ್ನು ಮರುಪಾವತಿ ಮಾಡಿರುವುದರಿಂದ ನಾನು ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ ದುರ್ಲಭ ಪಡೆಯುವ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**